**CANARYS AUTOMATIONS LIMITED**
(formerly Canarys Automations Private Limited)
**CIN:** L31101KA1991PLC012096
**Reg Off:** No. 566 & 567, 2nd Floor, 30th Main,
Attimabbe Road, Banagirinagara, Banashankari
3rd Stage, Bengaluru 560085, Karnataka India
Contact No: +91 98458 62780; Email Id: fin@ecanarys.com
website: www.ecanarys.com

**Date: 07.09.2024**

To,
**National Stock Exchange of India Limited ("NSE").**
Exchange Plaza, Plot No. C/1, G- Block,
Bandra –Kurla Complex, Bandra (East),
Mumbai-400051 Maharashtra

Scrip Code: CANARYS

Dear Sir/Madam,

**Subject: Newspaper Advertisement - For Completion of Dispatch of Notice of 33rd Annual General Meeting ("AGM").**

Dear Sirs,

Please find enclosed copies of the newspaper advertisements published today i.e. **Saturday, 07th September 2024**, in Vishwavani, Kannada and Financial Express, English (All Editions), regarding completing electronic dispatch of notice of 33rd Annual General Meeting ("AGM") and providing other information, pursuant to the provisions of Sections 108 of the Companies Act, 2013 and the rules made thereunder.

In compliance with Regulations 30 and 47 of SEBI (Listing Obligations and Disclosure Requirements) Regulations, 2015, please find enclosed herewith the copies of the above-mentioned public notice published today i.e. Saturday, 07th September 2024.

The same is also available on the website of the Company www.ecanarys.com

We request you to kindly take the same on record.

Thanking you

**For, Canarys Automations Limited**
(formerly known as Canarys Automations Private Limited)

Ambikeshwari M A
Digitally signed by Ambikeshwari M A
Date: 2024.09.07 19:14:25 +05'30'

**Ambikeshwari M A**
**Company Secretary & Compliance officer**
**Membership No. A67639**

Encl: as above

## ಸಮಾಚಾರ ಸಣ್ಣದಲ್ಲ

### ಇನ್‌ಸ್ಟಾಗ್ರಾಮ್ ಸ್ಟಾರ್ ಪೊಲೀಸರ ವಶಕ್ಕೆ

**ಬೆಂಗಳೂರು:** ಇನ್‌ಸ್ಟಾಗ್ರಾಮ್ ಸ್ಟಾರ್ ಯೂನಿಸ್ ಝುರೂರಾ ಎಂಬಾತನನ್ನು ಬೆಂಗಳೂರು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಅನುಮತಿ ಪಡೆಯದೆ ಭಾರಿ ಸಂಖ್ಯೆಯಲ್ಲಿ ಜನರನ್ನು ಸೇರಿಸಿದ್ದರಿಂದ ಪೊಲೀಸರು ಈ ಕ್ರಮ ಕೈಗೊಂಡಿದ್ದಾರೆ. ಆತ ಬೇರೆ ಬೇರೆ ದೇಶಗಳಿಗ ತೆರಳಿ ಅಚ್ಚರಿಯ ಉಡುಗೊರೆ ಕೊಡುತ್ತಿದ್ದ. ಅದರಂತೆ ಯೂನೀಸ್ ಬೆಂಗಳೂರಿನ ಎಂಜಿ ರಸ್ತೆಗೂ ಬಂದಿದ್ದ. ಸರಿಯಾದ ಉತ್ತರ ನೀಡಿದವರಿಗೆ ದುಬಾರಿ ಬೆಲೆಯ ಐಫೋನ್ ಗಿಫ್ಟ್ ಕೊಡುತ್ತಿದ್ದ. ಅಷ್ಟೇ ಅಲ್ಲದೆ ಎಂಜಿ ರಸ್ತೆಯಲ್ಲಿ ದಿ.ಪುನೀತ್ ರಾಜ್‌ಕುಮಾರ್ ಅವರ ಫೋಟೋ ಅನಾವರಣ ಮಾಡಿದ್ದ.

**ಯಾಕೆ ಬಂಧನ?:** ಆತ ಬಂದ ವಿಚಾರ ತಿಳಿದು ಆತನ ಅಭಿಮಾನಿಗಳು ನಡುರಸ್ತೆಯಲ್ಲಿಯೇ ಗುಂಪು ಸೇರಿದ ಹಿನ್ನೆಲೆಯಲ್ಲಿ ಸಾರ್ವಜನಿಕರಿಗೆ ತೊಂದರೆಯಾಗಿತ್ತು. ಅನುಮತಿ ಪಡೆಯದೆ ಜನರ ಗುಂಪು ಸೇರಿಸಿದ್ದರಿಂದ ಅಶೋಕನಗರ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಹೊಯ್ಸಳ ವಾಹನದ ಒಳಗೆ ಕೂಡ ವೀಡಿಯೋ ಮಾಡಿದ್ದ ಆತ, ಸ್ಟೇಷನ್ ಒಳಗೆ ಫೋಟೋ ಹಾಕಿ ತೊಂದರೆಯಲ್ಲಿದ್ದೇನೆ ಎಂಬ ಸಂದೇಶ ಕಳುಹಿಸಿದ್ದ. ಬಂಧಿಸಿ ಎಚ್ಚರಿಕೆ ನೀಡಿ ಪೊಲೀಸರು ಬಿಟ್ಟು ಕಳಿಸಿದ್ದಾರೆ.

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

### ಡ್ರಗ್ ಕಂಟ್ರೋಲರ್ ಆಫ್ ಜನರಲ್‌ಗೆ ಹೈಕೋರ್ಟ್ ನಿರ್ದೇಶನ

## ಔಷಧಗಳ ಮಾದರಿ ವರದಿ 60 ದಿನದಲ್ಲಿ ಲಭ್ಯ

**ಬೆಂಗಳೂರು:** ಔಷಧಿಗಳ ಮಾದರಿಗಳನ್ನು ಪರೀಕ್ಷೆಗಾಗಿ ಕಳುಹಿಸಿದ 60 ದಿನಗಳಲ್ಲಿ ಅದರ ಪರೀಕ್ಷೆ ಮತ್ತು ವಿಶ್ಲೇಷಣಾ ವರದಿ ಆನ್‌ಲೈನ್‌ನಲ್ಲಿ ಲಭ್ಯವಾಗುವಂತೆ ಮಾಡುವ ಪ್ರಕ್ರಿಯೆಯನ್ನು ಪರಿಣಾಮಕಾರಿಯಾಗಿ ಜಾರಿ ಮಾಡುವ ಸಂಬಂಧ ಕ್ರಮ ಕೈಗೊಳ್ಳುವಂತೆ ಡ್ರಗ್ ಕಂಟ್ರೋಲರ್ ಆಫ್ ಜನರಲ್ (ಡಿಸಿಜಿ) ಇಂಡಿಯಾಗೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಮೆಸ್ ಜಿಮ್ ಲ್ಯಾಬೊರೇಟರೀಸ್, ಅದರ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು ಮತ್ತಿತರರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎನ್.ಎಸ್. ಸಂಜಯ್ ಗೌಡ ಅವರಿದ್ದ ನ್ಯಾಯಪೀಠ ಈ ಸೂಚನೆ ನೀಡಿದೆ. ಮಾದರಿಗಳ ಪರೀಕ್ಷೆಯ ಎಲ್ಲ ಪ್ರಕ್ರಿಯೆ ಆನ್‌ಲೈನ್‌ನಲ್ಲಿ ಲಭ್ಯವಾಗುವಂತೆ ಮಾಡಬೇಕಾಗಿದೆ. ಇದರಿಂದ ಪರೀಕ್ಷೆ ಫಲಿತಾಂಶ ಮತ್ತು ಪ್ರಕ್ರಿಯೆಯ ಕುರಿತ ಪಾರದರ್ಶಕತೆ ಕಾಯ್ದಿಟ್ಟುಕೊಳ್ಳುವುದು ಮತ್ತು ಈ ಕುರಿತ ವಿವರಣೆ ಸಂಬಂಧಪಟ್ಟ ಎಲ್ಲ ಪಾಲುದಾರರಿಗೂ ಲಭ್ಯವಾಗಲಿದೆ. ನಿಯಮ ಗಳ 45ರ ಅನುಸಾರ ಪರೀಕ್ಷೆಗಾಗಿ ಸರ್ಕಾರದ ಪ್ರಯೋಗಾಲಯಕ್ಕೆ ರವಾನಿಸಿದ ಬಳಿಕ 60 ದಿನಗಳ ಮಿತಿಯನ್ನು ನಿಗದಿಪಡಿಸಲಾಗಿದೆ. ಆದರೆ, ಒಂದು ಪರೀಕ್ಷೆ ನಡೆಸುವುದಕ್ಕಾಗಿ ಒಂದು ವರ್ಷಕ್ಕಿಂತಲೂ ಹೆಚ್ಚು ಕಾಲ ತೆಗೆದುಕೊಂಡರೆ ಅದರಿಂದ ಔಷಧಗಳು ಮಾರುಕಟ್ಟೆಗೆ ಚಲಾವಣೆಗೆ ಬರುವ ಸಾಧ್ಯತೆಯಿದ್ದು, ಅದರ ದುಷ್ಪರಿಣಾಮ ಸಾಮಾನ್ಯ ಜನರ ಮೇಲೆ ಬೀಳಲಿದೆ ಎಂದು ಪೀಠ ಅಭಿಪ್ರಾಯಪಟ್ಟಿದೆ.



**ತಯಾರಕರಿಗೆ ವಿವರ ರವಾನಿಸಿ:** ಔಷಧ ತಯಾರಿಸಿದ ಸ್ಥಳ, ಔಷಧ ಮಾದರಿ ಪರೀಕ್ಷೆ, ವಿಶ್ಲೇಷಣೆಗಾಗಿ ಸರ್ಕಾರಿ ವಿಶ್ಲೇಷಗೆ ಕಳುಹಿಸಿರು ವುದು ಗೊತ್ತಾಗಲಿದೆ. ವರದಿ ಸ್ವೀಕರಿಸಿದ ನಂತರ ಕಾಯಿದೆಯ ಸೆಕ್ಷನ್ 18ಎ ಅಡಿ ವಿವರಗಳನ್ನು ಒದಗಿಸಲಾದ ಔಷಧದ ತಯಾರಕರಿಗೆ ತಕ್ಷಣ ರವಾನಿಸಬೇಕು. ಹೀಗಾಗಿ, ಪರೀಕ್ಷಾ ವರದಿಯ ಪ್ರತಿಯನ್ನು ಒದಗಿಸುವವರೆಗೂ ತನಿಖಾಧಿಕಾರಿ ಅಂತಹ ಸಂಸ್ಥೆಯ ವಿರುದ್ಧ ಯಾವುದೇ ಕ್ರಮ ಕೈಗೊಳ್ಳುವುದಕ್ಕೆ ಅವಕಾಶವಿಲ್ಲ ಎಂದು ಪೀಠ ತಿಳಿಸಿದೆ.

**ಪ್ರಕರಣದ ಹಿನ್ನೆಲೆ:** ಕರ್ನಾಟಕ ವಿಭಾಗದ ಔಷಧ ಗುಣಮಟ್ಟ ನಿಯಂತ್ರಣಾ ಇಲಾಖೆ ಇನ್ಸ್‌ಪೆಕ್ಟರ್ ಅವರು 2013ರ ಫೆಬ್ರವರಿ 28ರಂದು ಮಂಗಳೂರಿನ ಇಎಸ್‌ಐ ಆಸ್ಪತ್ರೆಯಿಂದ ಒಂದು ಔಷಧದ ಮಾದರಿ ಮತ್ತು 2014ರ ಜೂನ್ 12ರಂದು ಬೆಂಗಳೂರಿನ ರಾಜಾಜಿನಗರದ ಇಎಸ್‌ಐ ಆಸ್ಪತ್ರೆಯಲ್ಲಿ ಮತ್ತೊಂದು ಮಾದರಿ ಸಂಗ್ರಹಿಸಿದ್ದರು. ಈ ಔಷಧ ತಯಾರಿಸಿರುವುದು 2012ರಲ್ಲಿ ಮತ್ತು ಅದರ ಕಾಲಾವಧಿ 2015 ಆಗಿತ್ತು. ಇದರಲ್ಲಿ ಒಂದು ಭಾಗವನ್ನು ಇಎಸ್‌ಐ ಆಸ್ಪತ್ರೆಗೆ ಮತ್ತೊಂದು ಭಾಗವನ್ನು ಕೊಲ್ಕತ್ತದಲ್ಲಿರುವ ಪ್ರಯೋಗಾಲಯಕ್ಕೆ 2013ರ ಮಾರ್ಚ್ 4ರಂದು ರವಾನಿಸಲಾಗಿತ್ತು.

## ಜಿ.ಪಂ, ತಾ.ಪಂ ಚುನಾವಣೆ: ಸರಕಾರಕ್ಕೆ 3 ವಾರ ಕಾಲಾವಕಾಶ

**ಬೆಂಗಳೂರು:** ರಾಜ್ಯದ ತಾಪಂ ಹಾಗೂ ಜಿಪಂ ಕ್ಷೇತ್ರಗಳಿಗೆ ಮೀಸಲು ನಿಗದಿಪಡಿಸಲು ರಾಜ್ಯ ಸರಕಾರಕ್ಕೆ ಹೈಕೋರ್ಟ್ ಮತ್ತೆ ಮೂರು ವಾರ ಕಾಲಾವಕಾಶ ನೀಡಿದೆ.

ನಿಗದಿತ ಅವಧಿಯಲ್ಲಿ ಜಿಪಂ ಮತ್ತು ತಾಪಂ ಕ್ಷೇತ್ರ ಪುನರ್‌ವಿಂಗಡಣೆ ಹಾಗೂ ಮೀಸಲು ಪ್ರಕಟಿಸಲು ವಿಫಲವಾಗಿರುವ ರಾಜ್ಯ ಸರಕಾರದ ವಿರುದ್ಧ ರಾಜ್ಯ ಚುನಾವಣಾ ಆಯೋಗ ಸಲ್ಲಿಸಿರುವ ನ್ಯಾಯಾಂಗ ನಿಂದನೆ ಅರ್ಜಿ ಜತೆಗೆ, ನಗರ ಸ್ಥಳೀಯ ಸಂಸ್ಥೆಗಳ ಅಧ್ಯಕ್ಷ-ಉಪಾಧ್ಯಕ್ಷ ಸ್ಥಾನದ ಮೀಸಲಾತಿ ಪ್ರಕಟಿಸಲು ಏಕಸದಸ್ಯ ಪೀಠದ ಆದೇಶ ಪಾಲಿಸುವಲ್ಲಿ ಸರಕಾರ ವಿಫಲವಾಗಿದೆ ಎಂದು 2023ರಲ್ಲಿ ಸಲ್ಲಿಸಲಾದ ಎರಡು ಪ್ರತ್ಯೇಕ ನ್ಯಾಯಾಂಗ ನಿಂದನೆ ಅರ್ಜಿಗಳನ್ನು ನ್ಯಾಯಮೂರ್ತಿಗಳಾದ ವಿ.ಕಾಮೇಶ್ವರ್ ರಾವ್ ಮತ್ತು ಕೆ ರಾಜೇಶ್ ರೈ ಅವರ ನೇತೃತ್ವದ ವಿಭಾಗೀಯ ಪೀಠದ ಗುರುವಾರ ವಿಚಾರಣೆ ನಡೆಸಿತು. ರಾಜ್ಯ ಸರಕಾರದ ಪರ ಹೆಚ್ಚುವರಿ ಅಡ್ವೋಕೇಟ್ ಜನರಲ್ ಪ್ರತಿಮಾ ಹೊನ್ನಾಪುರ ಅವರು ಎಲ್ಲಾ 31 ಜಿಲ್ಲೆಗಳಲ್ಲಿ ಜಿಲ್ಲಾ ಪಂಚಾಯಿತಿ ಹಾಗೂ ತಾಲೂಕು ಪಂಚಾಯಿತಿ ಕ್ಷೇತ್ರಗಳ ಪುನರ್‌ವಿಂಗಡಣೆ ಕಾರ್ಯ ಮುಗಿದಿದೆ. ಈಗ ಮೀಸಲಾತಿ ನಿಗದಿಪಡಿಸುವ ಕಾರ್ಯ ಪ್ರಗತಿಯಲ್ಲಿದೆ. ಅದಕ್ಕಾಗಿ ಮೂರು ವಾರ ಕಾಲಾವಕಾಶಬೇಕು ಎಂದು ಕೋರಿದರು. ಇದನ್ನು ದಾಖಲಿಸಿಕೊಂಡ ಪೀಠ ವಿಚಾರಣೆಯನ್ನು ಸೆ. 30ಕ್ಕೆ ಮುಂದೂಡಿತು. ರಾಜ್ಯ ಚುನಾವಣಾ ಆಯೋಗದ ಪರ ಹಿರಿಯ ವಕೀಲ ಕೆ ಎನ್ ಫಣೀಂದ್ರ, ಅರ್ಜಿದಾರರ ಪರ ವಕೀಲ ಎ.ಮೊಹಮ್ಮದ್ ತಾಹೀರ್ ಹಾಜರಿದ್ದರು.




ರಾಜರಾಜೇಶ್ವರಿ ನಗರದ ಲಲಿತ್ ಕ್ಯಾಸಲ್ ಇಂಟರ್‌ನ್ಯಾಷನಲ್ ಶಾಲೆಯಲ್ಲಿ ನಡೆದ ಶಿಕ್ಷಕರ ದಿನಾಚರಣೆಯಲ್ಲಿ ಶಿಕ್ಷಕರನ್ನು ಸನ್ಮಾನಿಸಲಾಯಿತು. ಸಂಸ್ಥೆಯ ಅಧ್ಯಕ್ಷ ಡಾ. ಕಲಾಶಂಕರ್ ಹಾಗೂ ಕಾರ್ಯದರ್ಶಿ ಸವಿತಾ ಕಲಾಶಂಕರ್ ಇದ್ದರು.

### ಲಲಿತ್ ಕ್ಯಾಸಲ್ ಇಂಟರ್‌ನ್ಯಾಷನಲ್ ಶಾಲೆಯಲ್ಲಿ ಶಿಕ್ಷಕರ ದಿನಾಚರಣೆ

## ಮಕ್ಕಳ ಮನಸ್ಥಿತಿ ಅರಿತು ಕಲಿಕಾ ಸಾಮರ್ಥ್ಯ ಹೆಚ್ಚಿಸಿ

**ಬೆಂಗಳೂರು:** ರಾಜರಾಜೇಶ್ವರಿ ನಗರದಲ್ಲಿರುವ ಲಲಿತ್ ಕ್ಯಾಸಲ್ ಇಂಟರ್‌ನ್ಯಾಷನಲ್ ಶಾಲೆಯ ಆವರಣದಲ್ಲಿ ಶಿಕ್ಷಕರ ದಿನ ಆಚರಿಸಲಾಯಿತು. ನಿಸ್ವಾರ್ಥ ಸೇವೆ ಮೂಲಕ ವಿದ್ಯಾರ್ಥಿಗಳ ಭವಿಷ್ಯ ರೂಪಿಸುವ ಶಿಕ್ಷಕ ವೃತ್ತಿ ಅತ್ಯಂತ ಪವಿತ್ರವಾದದ್ದು. ಶಿಕ್ಷಕರು ಮಕ್ಕಳ ಮನಸ್ಥಿತಿ ಅರಿತು ಕಲಿಕಾ ಸಾಮರ್ಥ್ಯ ವೃದ್ಧಿಸುವಲ್ಲಿ ಶ್ರಮಿಸಬೇಕು ಎಂದು ಸನ್ಮಾನಿತ ನಿವೃತ್ತ ಸರಕಾರಿ ಶಿಕ್ಷಕಿಯರಾದ ಕುಮಾರಿ ಅಮೃತಬಾಯಿ ತಿಳಿಸಿದರು. ನಿವೃತ್ತ ಸರಕಾರಿ ಶಿಕ್ಷಕಿ ರತ್ನಮ್ಮ ಮಾತನಾಡಿ, ಶಿಕ್ಷಕರನ್ನು ಗುರುತಿಸಿ ನಮ್ಮನ್ನು ಬರಮಾಡಿಕೊಂಡು ಹಳೆಯ ವಿದ್ಯಾರ್ಥಿಯಾದ ಡಾ. ಕಲಾಶಂಕರ್ ಸನ್ಮಾನಿಸಿದ್ದು ನಮಗೆ ತುಂಬಾ ಸಂತೋಷ. ಮನಪೂರ್ವಕವಾಗಿ ಗುರುಗಳ ಆಶೀರ್ವಾದ ಎಂದಿಗೂ ಇರುತ್ತದೆ ಎಂದು ಆಶೀರ್ವದಿಸಿದರು. ಗುರು ಎಂದರೆ ವ್ಯಕ್ತಿಯಲ್ಲ ಒಂದು ಶಕ್ತಿ. ಅಜ್ಞಾನದಿಂದ ಸುಜ್ಞಾನದೆಡೆಗೆ ಕರೆದೊಯ್ಯುವ ಶಕ್ತಿಯೇ ಗುರು. ನಾವು ಎಷ್ಟು ಓದಿದ್ದೇವೆ ಎಂಬುದು ಮುಖ್ಯವಲ್ಲ ಆ ಓದು ನಮಗೆ ಎಷ್ಟು ಸಂಸ್ಕಾರವನ್ನು ಕಲಿಸಿದೆ ಎಂಬುದು ಬಹಳ ಮುಖ್ಯ ಎಂಬ ವಿಷಯವನ್ನು ಶಾಲೆಯ ಅಧ್ಯಕ್ಷರಾದ ಡಾ. ಕಲಾಶಂಕರ್ ಅವರು ಶಿಕ್ಷಕರನ್ನು ಹಾಗೂ ವಿದ್ಯಾರ್ಥಿಗಳನ್ನು ಕುರಿತು ಈ ಸಂದರ್ಭದಲ್ಲಿ ಮಾತನಾಡಿದರು. ಮುಗ್ಧಮನದಲ್ಲಿ ಅಕ್ಷರ ಬಿತ್ತಿ ಮಕ್ಕಳ ಭವಿಷ್ಯಕ್ಕೆ ಬೆಳಕನ್ನು ಚೆಲ್ಲಿ ಸುಂದರನಾಡು ಕಟ್ಟುವ ಪ್ರಜೆಯಾಗಬೇಕೆಂದು ಪ್ರೇರೇಪಿಸಬೇಕೆಂಬುದೇ ನಮ್ಮ ಶಾಲೆಯ ಶಿಕ್ಷಕರು ಪ್ರಯತ್ನಿಸಬೇಕು ಎಂದು ಕಾರ್ಯದರ್ಶಿ ಸವಿತಾ ಕಲಾಶಂಕರ್ ಹೇಳಿದರು. ಈ ಸಂದರ್ಭದಲ್ಲಿ ಶಾಲೆಯ ಎಲ್ಲಾ ಶಿಕ್ಷಕರು, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

**ಕ್ಯಾನರೀಸ್ ಆಟೊಮೇಶನ್ಸ್ ಲಿಮಿಟೆಡ್**
(ಹಿಂದಿನ ಹೆಸರು: ಕ್ಯಾನರೀಸ್ ಆಟೊಮೇಶನ್ಸ್ ಪ್ರೈವೇಟ್ ಲಿಮಿಟೆಡ್)
CIN: L31101KA1991PLC012096
ನೋಂ. ಕಚೇರಿ ವಿಳಾಸ: # 566 & 567, 2ನೇ ಮಹಡಿ, 30ನೇ ಮೈನ್, ಅತ್ತಿಮಬ್ಬೆ ರಸ್ತೆ, ಬನಗಿರಿನಗರ, ಬನಶಂಕರಿ 3ನೇ ಹಂತ, ಬೆಂಗಳೂರು-560085, ಕರ್ನಾಟಕ, ಭಾರತ.
ಸಂಪರ್ಕ ಸಂ: +91 98458 62780 : ಇ-ಮೇಲ್ ಐಡಿ: fin@ecanarys.com, ವೆಬ್‌ಸೈಟ್: www.ecanarys.com

**ಸೂಚನೆ**

**ಕ್ಯಾನರೀಸ್ ಆಟೊಮೇಶನ್ಸ್ ಲಿಮಿಟೆಡ್**(ಹಿಂದಿನ ಹೆಸರು: ಕ್ಯಾನರೀಸ್ ಆಟೊಮೇಶನ್ಸ್ ಪ್ರೈವೇಟ್ ಲಿಮಿಟೆಡ್) ("ಕಂಪನಿ") ಇದರ ಸದಸ್ಯರ **33ನೇ ವಾರ್ಷಿಕ ಮಹಾಸಭೆಯು** ("ಎಜಿಎಂ") **ಸೋಮವಾರ 30ನೇ ಸೆಪ್ಟೆಂಬರ್ 2024 ರಂದು ಸಂಜೆ 04:00 ಗಂಟೆಗೆ** ವಿಡಿಯೋಕಾನ್ಫರೆನ್ಸ್ (ವಿಸಿ)/ಇತರೆ ಆಡಿಯೋ ವಿಷಯಲ್ಸ್ ಮೀನ್ಸ್ (ಒಎವಿಎಂ) ಮೂಲಕ ಸೂಚನೆಯಲ್ಲಿ ನಿಗದಿಪಡಿಸಿದಂತೆ ವ್ಯವಹಾರಗಳ ವಹಿವಾಟಿಗಾಗಿ ನಡೆಯಲಿದೆ ಎಂದು ಈ ಮೂಲಕ ಸೂಚನೆ ನೀಡಲಾಗಿದೆ.

ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯದಿಂದ ("ಎಂಸಿಎ") ಮತ್ತು ಸೆಕ್ಯುರಿಟೀಸ್ ಮತ್ತು ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯ (ಸೆಬಿ) ಯಿಂದ ನೀಡಲಾದ ವಿವಿಧ ಸುತ್ತೋಲೆಗಳಂತೆ ಎಜಿಎಂ ನ್ನು ವಿಸಿ/ಒಎವಿಎಂ ಮೂಲಕ ಒಂದೇ ಸ್ಥಳದಲ್ಲಿ ಸದಸ್ಯರ ಭೌತಿಕ ಹಾಜರಾತಿ ಇಲ್ಲದೆ ನಡೆಸಲು ಅನುಮತಿ ನೀಡಲಾಗಿದೆ ಮತ್ತು ಸದಸ್ಯರಿಗೆ ಎಜಿಎಂ ಸೂಚನೆ ಮತ್ತು ವಾರ್ಷಿಕ ವರದಿಯ ಭೌತಿಕ ಪ್ರತಿಗಳನ್ನು ಕಳುಹಿಸಿಕೊಡುವ ಪ್ರಕ್ರಿಯೆಗೆ ವಿನಾಯಿತಿ ಲಭ್ಯವಾಗಿದೆ. ವಿಸಿ/ಒಎವಿಎಂ ಮೂಲಕ ಹಾಜರಾಗುವ ಸದಸ್ಯರನ್ನು ಸೆಕ್ಷನ್ 103 ರ ಕಾಯಿದೆಯಂತೆ ಕೋರಂ ಉದ್ದೇಶಕ್ಕಾಗಿ ಲೆಕ್ಕ ಹಾಕಲಾಗುವುದು. ವಿಸಿ/ಒಎವಿಎಂ ಮೂಲಕ ಎಜಿಎಂ ನಡೆಯುತ್ತಿರುವುದರಿಂದ ಸದಸ್ಯರಿಂದ ಪ್ರಾಕ್ಸಿಗಳನ್ನು ನೇಮಿಸುವ ಸೌಲಭ್ಯವು ಲಭ್ಯವಿರುವುದಿಲ್ಲ. 33ನೇ ಎಜಿಎಂ ಸೂಚನೆ ಮತ್ತು ಆರ್ಥಿಕ ವರ್ಷ 2023-24ರ ವಾರ್ಷಿಕ ವರದಿಯನ್ನು ಸದಸ್ಯರ ಇ-ಮೇಲ್ ವಿಳಾಸವು ಕಂಪನಿ/ಡೆಪಾಸಿಟರಿ ಪಾರ್ಟಿಸಿಪೆಂಟ್(ಟ್ಸ್) / ರಿಜಿಸ್ಟ್ರಾರ್ ಮತ್ತು ಟ್ರಾನ್ಸ್‌ಫರ್ ಏಜೆಂಟ್‌ರ ಬಳಿ ಈಗಾಗಲೇ ನೋಂದಾಯಿತವಾಗಿದ್ದರೆ ಅಂಥವರಿಗೆ ಇ-ಮೇಲ್ ಮೂಲಕ ಕಳುಹಿಸಿಕೊಡುವ ಪ್ರಕ್ರಿಯೆ **ಶುಕ್ರವಾರ 06ನೇ ಸೆಪ್ಟೆಂಬರ್, 2024** ರಂದು ಮುಕ್ತಾಯಗೊಂಡಿದೆ.

ಸದಸ್ಯರಿಗೆ ಈ ಮೂಲಕ ಸೂಚನೆ ನೀಡುವುದೇನೆಂದರೆ, ಸಭೆಯ ಸೂಚನೆ ಮತ್ತು ಮೇಲೆ ಹೇಳಲಾದ ದಾಖಲೆಗಳು ಕಂಪನಿಯ ವೆಬ್‌ಸೈಟ್ www.ecanarys.com ಮತ್ತು ಲಿಂಕ್ ಇನ್ ಟೈಮ್ ಇಂಡಿಯ ಪ್ರೈವೇಟ್ ಲಿಮಿಟೆಡ್ ನ ವೆಬ್‌ಸೈಟ್ www.linkintime.co.in ನಲ್ಲಿ ಲಭ್ಯವಿರುತ್ತದೆ.

ಸದಸ್ಯರಿಗೆ ಈ ಮೂಲಕ ತಿಳಿಸುವುದೇನೆಂದರೆ, ಸೆಕ್ಷನ್ 108ರ ಕಂಪನಿಗಳ ಕಾಯಿದೆ, 2013ರ ನಿಯಮ 20 ನ್ನು ಓದಿಕೊಂಡಂತೆ ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014 (ತಿದ್ದುಪಡಿ(ಗಳು), ಬದಲಾವಣೆ(ಗಳು), ಅಥವಾ ಮರು ಎನಾಕ್ಟ್‌ಮೆಂಟ್ (ಗಳು) ಇದ್ದಲ್ಲಿ), ನಿಯಂತ್ರಣ 44ರ ಸೆಬಿ ಲಿಸ್ಟಿಂಗ್ ಆಬ್ಲಿಗೇಷನ್ಸ್, ಸೆಕ್ರೆಟೇರಿಯಲ್ ಸ್ಟ್ಯಾಂಡರ್ಡ್-2 (ಎಸ್‌ಎಸ್-2) ಸಾಮಾನ್ಯ ಸಭೆಗಳು ಇನ್ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರೀಸ್ ಆಫ್ ಇಂಡಿಯ, ಎಂಸಿಎ ಸುತ್ತೋಲೆಗಳು ಮತ್ತು ಸೆಬಿ ಸುತ್ತೋಲೆಗಳಂತೆ ಕಂಪನಿಯು ಸದಸ್ಯರಿಗೆ ಎಜಿಎಂ ನಲ್ಲಿ ವಿದ್ಯುನ್ಮಾನ ಮೂಲಕ ಎಜಿಎಂ ನಲ್ಲಿ ವ್ಯವಹಾರಗಳ ಮೇಲೆ ಮತದಾನ ನಡೆಸಲು ಇ-ವೋಟಿಂಗ್ ಸರ್ವಿಸಸ್ ("**ರಿಮೋಟ್ ಇ-ವೋಟಿಂಗ್**") ಮೂಲಕ ಮತದಾನದ ಸೌಲಭ್ಯವನ್ನು ಲಿಂಕ್ ಇನ್ ಟೈಮ್ ಇಂಡಿಯ ಪ್ರೈವೇಟ್ ಲಿಮಿಟೆಡ್ ("**ಲಿಂಕ್‌ಇನ್‌ಟೈಮ್**") ಮೂಲಕ ಕಲ್ಪಿಸಿದೆ. ಕಂಪನಿಯು ವಿಸಿ/ಒಎವಿಎಂ ಮೂಲಕ ನಡೆಯುವ ಎಜಿಎಂ ಸಂದರ್ಭದಲ್ಲೂ ಸಹ ಇ-ಮತದಾನ ಸೌಲಭ್ಯ ("**ಇ-ವೋಟಿಂಗ್**")ನ್ನು ಷೇರುದಾರರಿಗೆ ಒದಗಿಸಿದ್ದು, ರಿಮೋಟ್ ಇ-ಮತದಾನದ ಮೂಲಕ ಈಗಾಗಲೇ ಮತ ಚಲಾಯಿಸದ ಸದಸ್ಯರಿಗೆ ತಮ್ಮ ಮತವನ್ನು ಇ-ಮತದಾನದ ಮೂಲಕ ಚಲಾಯಿಸಲು ಅವಕಾಶ ನೀಡಿದೆ.

ಎಂಸಿಎ ಸುತ್ತೋಲೆಗಳು ಮತ್ತು ಸೆಬಿ ಸುತ್ತೋಲೆಗಳ ಅನುಸಾರ ಷೇರುದಾರರು ತಮ್ಮ ಇ-ಮೇಲ್ ಐಡಿಗಳನ್ನು ಈ ಕೆಳಗಿನಂತೆ ಅಪ್‌ಡೇಟ್ ಮಾಡುವ ಮೂಲಕ ಸೂಚನೆಯ ಎಲೆಕ್ಟ್ರಾನಿಕ್ ಪ್ರತಿಗಳು/ಲಾಗಿನ್ ವಿವರಗಳನ್ನು ಪಡೆಯಲು ಸಾಧ್ಯವಾಗುತ್ತದೆ.

| | |
|---|---|
| ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ಷೇರುದಾರರು : | ಈಗಾಗಲೇ ಷೇರುದಾರರು ತಮ್ಮ ಷೇರುಗಳನ್ನು ಭೌತಿಕ ರೂಪದಲ್ಲಿ ಹೊಂದಿದ್ದು, ತಮ್ಮ ಇ-ಮೇಲ್ ವಿಳಾಸವನ್ನು ಕಂಪನಿ/ಡೆಪಾಸಿಟರಿ ಪಾಟಿಸಿಪೆಂಟ್(ಟ್ಸ್)/ರಿಜಿಸ್ಟ್ರಾರ್ ಮತ್ತು ಷೇರು ಟ್ರಾನ್ಸ್‌ಫರ್ ಏಜೆಂಟ್ಸ್ (ಆರ್‌ಟಿಎ) ಬಳಿ ನೋಂದಾಯಿಸಿಲ್ಲವಾದರೆ, ಕಂಪನಿಯವರು ಆರ್‌ಟಿಎ **ಲಿಂಕ್ ಇನ್‌ಟೈಮ್ ಇಂಡಿಯ ಪ್ರೈವೇಟ್ ಲಿಮಿಟೆಡ್** ಗೆ "ಇ-ಮೇಲ್ ಅಪ್‌ಡೇಟ್ ಮಾಡಲು ವಿನಂತಿ" ಎಂದು ಲಿಖಿತ ಮೂಲಕ ಮನವಿಯನ್ನು instameet@linkintime.co.in ಗೆ ಕಳುಹಿಸಬೇಕು. ಷೇರುದಾರರು ತಮ್ಮ ಪತ್ರದಲ್ಲಿ ಫೋಲಿಯೋ ಸಂಖ್ಯೆ, ಷೇರುದಾರರ ಹೆಸರು ಜೊತೆಗೆ ಷೇರು ಪ್ರಮಾಣಪತ್ರಗಳ ಸ್ಕ್ಯಾನ್ ಪ್ರತಿ (ಹಿಂಭಾಗ ಮತ್ತು ಮುಂಭಾಗ) ಹಾಗೂ ಸ್ವಯಂ ದೃಢೀಕರಿಸಿದ ಪ್ಯಾನ್‌ಕಾರ್ಡ್ ಪ್ರತಿ ಮತು ಯಾವುದೇ ದಾಖಲೆಗಳು (ಅಂದರೆ ಚಾಲನಾ ಪರವಾನಿಗೆ, ಪಾಸ್‌ಪೋರ್ಟ್, ಬ್ಯಾಂಕ್ ಹೇಳಿಕೆಗಳು, ಆಧಾರ್ ಇತ್ಯಾದಿ) ಗಳನ್ನು ಷೇರುದಾರರ ನೋಂದಾಯಿತ ವಿಳಾಸದ ಜೊತೆಗೆ ಕಳುಹಿಸಬೇಕು. |
| ಡಿಮೆಟೀರಿಯಲೈಸ್ಡ್ ರೂಪದಲ್ಲಿ ಷೇರುಗಳನ್ನು ಹೊಂದಿರುವ ಷೇರುದಾರರು: | ಡಿಮೆಟೀರಿಯಲೈಸ್ಡ್ ರೂಪದಲ್ಲಿ ಷೇರುಗಳನ್ನು ಹೊಂದಿರುವ ಷೇರುದಾರರು ತಮ್ಮ ಇ-ಮೇಲ್ ವಿಳಾಸವನ್ನು ಡೆಪಾಸಿಟರಿ ಪಾರ್ಟಿಸಿಪೆಂಟ್ಸ್ ಬಳಿ ಅಪ್‌ಡೇಟ್ ಮಾಡದೆ ಇದ್ದರೆ ಅವರನ್ನು ಡೆಪಾಸಿಟರಿ ಪಾರ್ಟಿಸಿಪೆಂಟ್ಸ್ ಬಳಿ ನೋಂದಾಯಿಸಲು ಕೋರಲಾಗಿದೆ. |

ಕಂಪನಿಯು ಮೆ॥ ಗಣಪತಿ ಮತ್ತು ಮೋಹನ್, ಪ್ರಾಕ್ಟೀಸಿಂಗ್ ಕಂಪನಿ ಕಾರ್ಯದರ್ಶಿ (ಸದಸ್ಯತ್ವ ಸಂ. 5659 ಮತ್ತು ಪ್ರಾಕ್ಟೀಸ್ ಪ್ರಮಾಣಪತ್ರ ಸಂ. 4520) ಇವರನ್ನು ರಿಮೋಟ್ ಇ-ಮತದಾನ ಮತ್ತು ಎಜಿಎಂ ಸಂದರ್ಭದಲ್ಲಿ ನಡೆಯುವ ಇ-ಮತದಾನದ ಪಾರದರ್ಶಕತೆಗಾಗಿ ಪರಿಶೀಲಕರನ್ನಾಗಿ ನೇಮಿಸಿದೆ.

ರಿಮೋಟ್ ಇ-ಮತದಾನದ ಸೂಚನೆಗಳು ಮತ್ತು ಇ-ಮತದಾನದ ಸೂಚನೆಗಳನ್ನು ಎಜಿಎಂ ನಲ್ಲಿ ನೀಡಲಾಗಿದೆ. ಷೇರುದಾರರು ಅದನ್ನು ಗಮನಿಸಲು ಕೋರಲಾಗಿದೆ.

ಎ) ರಿಮೋಟ್ ಇ-ಮತದಾನವು **ಶುಕ್ರವಾರ, ಸೆಪ್ಟೆಂಬರ್ 27, 2024ರಂದು ಬೆಳಿಗ್ಗೆ 9.00 ಗಂಟೆಗೆ** ಆರಂಭವಾಗಿ **ಭಾನುವಾರ ಸೆಪ್ಟೆಂಬರ್ 29, 2024ರಂದು ಸಂಜೆ 5.00 ಗಂಟೆಗೆ** (ಭಾರತೀಯ ಕಾಲಮಾನ) **ಮುಕ್ತಾಯಗೊಳ್ಳಲಿದೆ**. ರಿಮೋಟ್ ಇ-ಮತದಾನದ ಮಾಡ್ಯೂಲ್‌ನ್ನು ಆ ನಂತರ ಲಿಂಕ್‌ಇನ್‌ಟೈಮ್ ನಿಷ್ಕ್ರಿಯಗೊಳಿಸಲಿದೆ ಹಾಗೂ ಆ ದಿನಾಂಕ ಮತ್ತು ಸಮಯದ ನಂತರ ವಿದ್ಯುನ್ಮಾನವಾಗಿ ಮತ ಚಲಾಯಿಸಲು ಅವಕಾಶವಿರುವುದಿಲ್ಲ. ಈ ಸಂದರ್ಭದಲ್ಲಿ ಕಂಪನಿಯ ಷೇರುದಾರರು ಭೌತಿಕ ಅಥವಾ ಡಿಮೆಟೀರಿಯಲೈಸ್ಡ್ ರೂಪದಲ್ಲಿ ಹೊಂದಿರುವ ಷೇರುಗಳನ್ನು **ಅಂತಿಮ ದಿನಾಂಕ, ಸೋಮವಾರ ಅಂದರೆ ಸೆಪ್ಟೆಂಬರ್ 23, 2024 ರವರೆಗೆ** ಹೊಂದಿರುವವರು ತಮ್ಮ ಮತವನ್ನು ಎಜಿಎಂ ಸೂಚನೆಯಲ್ಲಿ ತಿಳಿಸಿರುವಂತೆ ರಿಮೋಟ್ ಇ-ಮತದಾನದ ಮೂಲಕ ಮತ ಚಲಾಯಿಸಲು ಅರ್ಹರಾಗಿರುತ್ತಾರೆ. ಎಜಿಎಂ ಗೆ ಮೊದಲೇ ರಿಮೋಟ್ ಇ-ಮತದಾನ ಮಾಡಿದ್ದಲ್ಲಿ ಅವರು ವಿಸಿ/ಒಎವಿಎಂ ಮೂಲಕ ಎಜಿಎಂ ಗೆ ಹಾಜರಾಗಬಹುದು ಆದರೆ ಅವರಿಗೆ ಮತ್ತೊಮ್ಮೆ ಮತ ಚಲಾಯಿಸಲು ಅವಕಾಶವಿರುವುದಿಲ್ಲ. ಷೇರುದಾರರು ಒಂದು ಬಾರಿ ಮತ ಚಲಾಯಿಸಿದ ನಂತರ ಯಾವುದೇ ಕಾರಣಕ್ಕೂ ಅದನ್ನು ಬದಲಾಯಿಸಲು ಅವಕಾಶ ನೀಡಲಾಗುವುದಿಲ್ಲ.

ಬಿ) ಷೇರುದಾರರ ಮತದಾನದ ಹಕ್ಕು (ರಿಮೋಟ್ ಇ-ವೋಟಿಂಗ್ ಅಥವಾ ಇ-ಮತದಾನ ಎಜಿಎಂ ಸಂದರ್ಭದಲ್ಲಿ) ಅಂದರೆ **ಕಟ್‌ಆಫ್ ದಿನಾಂಕ ಸೋಮವಾರ, 23ನೇ ಸೆಪ್ಟೆಂಬರ್ 2024 ರವರೆಗೆ** ಷೇರುದಾರರ ಪಾವತಿಸಿದ ಈಕ್ವಿಟಿ ಷೇರು ಬಂಡವಾಳಕ್ಕೆ ಸಮನಾಗಿರುತ್ತದೆ. ಒಬ್ಬ ವ್ಯಕ್ತಿಯ ಹೆಸರು ಷೇರುದಾರರ ರಿಜಿಸ್ಟರ್‌ನಲ್ಲಿ ಅಥವಾ ಡೆಪಾಸಿಟರಿಗಳು/ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟ್‌ರು ನಿರ್ವಹಿಸುವ ಲಾಭದಾಯಕ ಮಾಲೀಕರ ಪಟ್ಟಿಯಲ್ಲಿ ಕಟ್‌ಆಫ್ ದಿನಾಂಕದವರೆಗೆ ಇದ್ದರೆ, ಆಗ ಅವರು ರಿಮೋಟ್ ಇ-ಮತದಾನ ಹಾಗೂ ಎಜಿಎಂ ಸಂದರ್ಭದಲ್ಲಿ ಇ-ಮತದಾನದ ಹಕ್ಕನ್ನು ಪಡೆಯುತ್ತಾರೆ.

ಸಿ) ಯಾವುದೇ ವ್ಯಕ್ತಿ ಎಜಿಎಂ ನೋಟೀಸನ್ನು ಕಳುಹಿಸಿದ ನಂತರ ಷೇರುಗಳನ್ನು ಹೊಂದಿ ಮತ್ತು ಕಟ್‌ಆಫ್ ದಿನಾಂಕದ ನಂತರ ಕಂಪನಿಯ ಷೇರುದಾರರಾದರೆ, ಅವರು ಎಜಿಎಂ ನ ಸೂಚನೆಯಲ್ಲಿ ನೀಡಲಾದ ಸೂಚನೆಗಳನ್ನು ಅನುಸರಿಸಬೇಕು. ಯಾವುದೇ ವ್ಯಕ್ತಿ ಕಟ್‌ಆಫ್ ದಿನಾಂಕದವರೆಗೆ ಷೇರುದಾರರಲ್ಲದಿದ್ದರೆ ಅವರು ಎಜಿಎಂ ಸೂಚನೆಯಲ್ಲಿ ರಿಮೋಟ್ ಇ-ಮತದಾನ ಮತ್ತು ಇ-ಮತದಾನದ ಬಗ್ಗೆ ಮಾಹಿತಿಯನ್ನು ಕೇವಲ ಮಾಹಿತಿ ಉದ್ದೇಶಕ್ಕೆ ಮಾತ್ರ ಬಳಸಬೇಕು.

ಎಜಿಎಂ ನ ಸೂಚನೆಯ ಪ್ರತಿ ಕಂಪನಿಯ ವೆಬ್‌ಸೈಟ್ www.ecanarys.com ಮತ್ತು ಕಂಪನಿಯ ಷೇರುಗಳನ್ನು ಪಟ್ಟಿಮಾಡಲಾದ ವೆಬ್‌ಸೈಟ್ ಅಂದರೆ ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯ ಲಿಮಿಟೆಡ್ www.nseindia.com ರಲ್ಲಿ ಲಭ್ಯವಿರುತ್ತದೆ. ಎಜಿಎಂ ಸೂಚನೆಯ ಪ್ರತಿಯು ಲಿಂಕ್‌ಇನ್‌ಟೈಮ್ ವೆಬ್‌ಸೈಟ್ www.linkintime.co.in ನಲ್ಲಿ ಲಭ್ಯವಿರುತ್ತದೆ.

ರಿಮೋಟ್ ಇ-ಮತದಾನ ಮತ್ತು ಇ-ಮತದಾನದ ಫಲಿತಾಂಶಗಳನ್ನು ಎಜಿಎಂ ಮುಗಿದ ಎರಡು ಕೆಲಸದ ದಿನಗಳಿಗಿಂತ ಮೊದಲೇ ಘೋಷಿಸಲಾಗುವುದು, ಫಲಿತಾಂಶಗಳನ್ನು ಪರಿಶೀಲಕರ ವರದಿ ಜೊತೆಗೆ ಕಂಪನಿಯ ವೆಬ್‌ಸೈಟ್ www.ecanarys.com ನಲ್ಲಿ ಕೂಡಲೇ ಘೋಷಿಸಲಾಗುವುದು ಮತ್ತು ಲಿಂಕ್‌ಇನ್‌ಟೈಮ್ ಅಂದರೆ www.linkintime.co.in ನಲ್ಲಿ ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯ ಲಿಮಿಟೆಡ್ www.nseindia.com ಗೆ ಮಾಹಿತಿ ನೀಡಲಾಗುವುದು.

ಒಂದು ವೇಳೆ ರಿಮೋಟ್ ಇ-ಮತದಾನ ಮತ್ತು ಇ-ಮತದಾನದ ಬಗ್ಗೆ ಯಾವುದೇ ವಿಚಾರಣೆಗಳಿದ್ದರೆ, ಆಗಾಗ ಕೇಳುವ ಪ್ರಶ್ನೆಗಳು (ಎಫ್‌ಎಕ್ಯು) ಆಧಾರ ಮಾಡಿಕೊಳ್ಳಿ ಮತ್ತು ಇ-ಮತದಾನ ಕೈಪಿಡಿ **www.linkintime.co.in** ನಲ್ಲಿ ಹೆಲ್ಪ್ ವಿಭಾಗದಲ್ಲಿ ಲಭ್ಯವಿರುತ್ತದೆ ಅಥವಾ **instameet@linkintime.com** ಗೆ ಇ-ಮೇಲ್ ಮಾಡಿರಿ. ಅಥವಾ ಸಂಪರ್ಕಿಸಿ: ಶ್ರೀ ರಾಜೀವ್ ರಂಜನ್, ಸಹಾಯಕ ಉಪಾಧ್ಯಕ್ಷರು, ಇ-ವೋಟಿಂಗ್ (91 22 49186060 ಸಂಪರ್ಕ ಸಂಖ್ಯೆ).

ಷೇರುದಾರರು ಎಜಿಎಂ ಸಂದರ್ಭದಲ್ಲಿ ಸ್ಪೀಕರ್‌ಗಳಾಗಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅಥವಾ ಪ್ರಶ್ನೆಗಳನ್ನು ಕೇಳಲು ತಮ್ಮ ಮನವಿಯನ್ನು ನೋಂದಾಯಿತ ಇ-ಮೇಲ್ ವಿಳಾಸದೊಂದಿಗೆ ತಮ್ಮ ಹೆಸರು, ಡಿಪಿ ಐಡಿ ಮತ್ತು ಕ್ಲೈಂಟ್ ಐಡಿ/ಫೋಲಿಯೊ ಸಂಖ್ಯೆ, ಪ್ಯಾನ್ ನಂಬರ್, ಮೊಬೈಲ್ ಸಂಖ್ಯೆಗಳ ಜೊತೆಗೆ ತಮ್ಮ ವಿಚಾರಣೆಗಳನ್ನು **ambikeshwari.m@ecanarys.com** ಗೆ ಸಭೆಯ ಏಳು ದಿನಗಳ ಮೊದಲಾಗಿ ಕಳುಹಿಸಬೇಕು.

**ಕ್ಯಾನರೀಸ್ ಆಟೊಮೇಶನ್ಸ್ ಲಿಮಿಟೆಡ್**
**(ಹಿಂದಿನ ಹೆಸರು: ಕ್ಯಾನರೀಸ್‌ಆಟೊಮೇಶನ್ಸ್ ಪ್ರೈವೇಟ್ ಲಿಮಿಟೆಡ್)**
**ಸಹಿ/-**
**ಸಿಎಸ್ ಅಂಬಿಕೇಶ್ವರಿ ಎಂ ಎ**
ಕಂಪನಿ ಕಾರ್ಯದರ್ಶಿ ಮತ್ತು ಕಾಂಪ್ಲಯನ್ಸ್ ಅಧಿಕಾರಿ

**ಸ್ಥಳ: ಬೆಂಗಳೂರು**
**ದಿನಾಂಕ: ಸೆಪ್ಟೆಂಬರ್ 06, 2024**

## ಇ-ಸ್ವತ್ತು ನೀಡಿಕೆ ವಿಳಂಬ: ಕೇಂದ್ರದ ಎನ್‌ಐಸಿ ಸೇವೆ ರದ್ದು

**ಬೆಂಗಳೂರು:** ಗ್ರಾಮೀಣ ಪ್ರದೇಶಗಳ ಆಸ್ತಿಗಳಿಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯಿತಿಗಳು ವಿತರಿಸುತ್ತಿರುವ ಇ-ಸ್ವತ್ತು ದಾಖಲೆ ಪಡೆಯುವಲ್ಲಿ



ವಿಳಂಬವಾಗುತ್ತಿರುವ ಬಗ್ಗೆ ಸಾಕಷ್ಟು ದೂರುಗಳು ಬರುತ್ತಿವೆ. ಹೀಗಾಗಿ, ಸಂಬಂಧಿಸಿದ ತಂತ್ರಜ್ಞಾನ ಅಳವಡಿಸಿರುವ ಕೇಂದ್ರ ಸರಕಾರದ ಎನ್.ಐ.ಸಿ ಸೇವೆಯನ್ನು ರದ್ದು ಮಾಡುವಂತೆ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಸೂಚಿಸಿದ್ದಾರೆ.

ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಸಭೆ ನಡೆಸಿದ ಸಚಿವರು, ಗ್ರಾಮೀಣ ರೈತರ ಸ್ನೇಹಿಯಾಗಿ ಕಾರ್ಯ ನಿರ್ವಹಿಸಬೇಕಿದ್ದ ಇ-ಸ್ವತ್ತು ಕಾರ್ಯಕ್ರಮ ಕಳೆದ 8 ತಿಂಗಳಿಂದ ಒಂದಲ್ಲ ಒಂದು ಕಾರಣಕ್ಕೆ ಸಮರ್ಪಕವಾಗಿ ಕಾರ್ಯ ನಿರ್ವಹಿಸದಿದ್ದರೂ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳದಿರುವುದನ್ನು ಸಚಿವರು ಆಕ್ಷೇಪಿಸಿದರು. ತಕ್ಷಣವೇ ಪರ್ಯಾಯ ಕ್ರಮಗಳನ್ನು ತೆಗೆದುಕೊಂಡು, ವಿಳಂಬವಿಲ್ಲದೇ ಹಾಗೂ ಭ್ರಷ್ಟಾಚಾರರಹಿತವಾಗಿ ಇ-ಸ್ವತ್ತು ದಾಖಲೆಗಳನ್ನು ನೀಡುವಂತೆ ಮಾರ್ಪಾಡುಗಳನ್ನು ತರಬೇಕೆಂದು ಸೂಚಿಸಿದರು.

**ಸಬಲೀಕರಣ-ಸರಳೀಕರಣ:** ಈ ಕಾರ್ಯಕ್ರಮವನ್ನು ಸಬಲೀಕರಣಗೊಳಿಸುವುದರೊಂದಿಗೆ ಸರಳೀಕರಣ ಮಾಡಲು ತಿಳಿಸಿದ ಸಚಿವರು, ಭ್ರಷ್ಟಾಚಾರರಹಿತವಾಗಿ ಜನರು ಇ-ಸ್ವತ್ತು ದಾಖಲೆಗಳನ್ನು ಶೀಘ್ರಗತಿಯಲ್ಲಿ ಪಡೆದುಕೊಳ್ಳುವಂತೆ ವ್ಯವಸ್ಥೆಗೆ ಕಾಯಕಲ್ಪ ನೀಡಲು ತಕ್ಷಣವೇ ಕ್ರಮ ಕೈಗೊಳ್ಳಬೇಕು. ತಂತ್ರಜ್ಞಾನ ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿಯಾಗಿದ್ದರೂ, ಕೇಂದ್ರ ಸರಕಾರದ ಎನ್.ಐ.ಸಿ ಸಂಸ್ಥೆ ತಂತ್ರಜ್ಞಾನ ಅಳವಡಿಕೆಯಲ್ಲಿ ಇನ್ನೂ ಬಹಳಷ್ಟು ಹಿಂದೆ ಇರುವುದರಿಂದ ನಮ್ಮ ಗ್ರಾಮೀಣ ರೈತರು ತೊಂದರೆಗೊಳಗಾಗಿದ್ದಾರೆ. ಇ ಸ್ವತ್ತು ನೀಡಿಕೆಯಲ್ಲಿ ಆಗುತ್ತಿರುವ ವಿಳಂಬ ಗತಿ ಹಾಗೂ ಮತ್ತಿತರ ಕಾರಣಗಳು ಇಡೀ ಗ್ರಾಮೀಣಾಭಿವೃದ್ಧಿ ಇಲಾಖೆಯ ಆಡಳಿತ ಯಂತ್ರದ ಮೇಲೆ ಪರಿಣಾಮ ಬೀರುತ್ತದೆ ಎಂದು ಎಚ್ಚರಿಸಿದರು. ಸಭೆಯಲ್ಲಿ ಪಂಚಾಯತ್ ರಾಜ್ ಆಯುಕ್ತೆ ಡಾ.ಅರುಂಧತಿ ಚಂದ್ರಶೇಖರ್, ಇ-ಗೌರ್ನೆನ್ಸ್ ನಿರ್ದೇಶಕಿ ಡಾ.ನಂದಿನಿ ದೇವಿ ಸಭೆಯಲ್ಲಿದ್ದರು.

## ನಿರ್ದೇಶಕ ಯೋಗರಾಜ್ ಭಟ್ ವಿರುದ್ಧ ಎಫ್‌ಐಆರ್

**ಬೆಂಗಳೂರು:** 'ಮನದ ಕಡಲು' ಸಿನಿಮಾ ಚಿತ್ರೀಕರಣದ ವೇಳೆ 30 ಅಡಿ ಎತ್ತರದ ಏಣಿಯಿಂದ ಬಿದ್ದು ಲೈಟ್ ಬಾಯ್ ಮೃತಪಟ್ಟಿರುವ ಘಟನೆ ಬೆಂಗಳೂರಿನ ಮಾದನಾಯಕನ ಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ. ಈ ಸಂಬಂಧ ಚಿತ್ರದ ನಿರ್ದೇಶಕ ಯೋಗರಾಜ ಭಟ್ ವಿರುದ್ಧ ಎಫ್‌ಐಆರ್ ದಾಖಲಾಗಿದೆ.



ತುಮಕೂರು ಜಿಲ್ಲೆಯ ಕೊರಟಗೆರೆ ಮೂಲದ ಮೋಹನ್ ಕುಮಾರ್ (30) ಮೃತ ಲೈಟ್ ಬಾಯ್. ಸೆ.3ರಂದು ಮಾದನಾಯಕನಹಳ್ಳಿ ಸಮೀಪದ ವಿಆರ್‌ಎಲ್ ಅರೇನಾ ಬಳಿ ಚಿತ್ರೀಕರಣ ನಡೆಯುತ್ತಿತ್ತು. ಆ ವೇಳೆ ಅವಘಡ ಸಂಭವಿಸಿದೆ. ಮೃತ ಮೋಹನ್ ಹಾಗೂ ಅವರ ಸಹೋದರ ಬೆಂಗಳೂರು ನಗರದ ಬಡಾವಣೆಯೊಂದರಲ್ಲಿ ನೆಲೆಸಿದ್ದರು. ಚಿತ್ರರಂಗದಲ್ಲಿ ಇಬ್ಬರೂ ಲೈಟ್‌ಬಾಯ್‌ಗಳಾಗಿ ಕೆಲಸ ಮಾಡುತ್ತಿದ್ದರು. ಸೆ.3ರಂದು ಚಿತ್ರೀಕರಣದ ವೇಳೆ ಮೋಹನ್ 30 ಅಡಿ ಎತ್ತರದ ಏಣಿಯಿಂದ ಬಿದ್ದು ತೀವ್ರವಾಗಿ ಗಾಯಗೊಂಡಿದ್ದ. ಅವನನ್ನು ಗೊರಗುಂಟೆ ಪಾಳ್ಯದ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆ ಫಲಿಸದೆ ಗುರುವಾರ ಮೃತಪಟ್ಟಿದ್ದಾನೆ.

ಚಿತ್ರೀಕರಣದ ವೇಳೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳದೇ ನಿರ್ಲಕ್ಷ್ಯ ವಹಿಸಿದ ಆರೋಪ ಅಡಿ ಚಿತ್ರ ನಿರ್ದೇಶಕ ಯೋಗರಾಜ್ ಭಟ್ ಹಾಗೂ ವ್ಯವಸ್ಥಾಪಕ ಸುರೇಶ್ ಸೇರಿ ಮೂವರ ವಿರುದ್ಧ ಮಾದನಾಯಕನಹಳ್ಳಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

## ಓಲಾ ಆಟೋಚಾಲಕನ ಸೆರೆ

**ಬೆಂಗಳೂರು:** ಬುಕ್ ಮಾಡಿದ್ದ ಓಲಾ ಆಟೋ ರದ್ದು ಮಾಡಿದ್ದಕ್ಕೆ ಆಕ್ರೋಶಗೊಂಡ ಆಟೋಚಾಲಕನೊಬ್ಬ ಯುವತಿಯನ್ನು ಹಿಂಬಾಲಿಸಿ ಅವಾಚ್ಯ ಶಬ್ದಗಳಿಂದ ನಿಂದಿಸಿದ ಘಟನೆ ನಗರದಲ್ಲಿ ನಡೆದಿದ್ದು, ಪೊಲೀಸರು ಆಟೋಚಾಲಕನನ್ನು ಬಂಧಿಸಿದ್ದಾರೆ. ಮಾಗಡಿ ರೋಡ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸೆ.2ರಂದು ಯುವತಿ, ಓಲಾ ಆಟೋ ಬುಕ್ ಮಾಡಿದ್ದರು. ಸಕಾಲಕ್ಕೆ ಆಟೋ ಬಾರದ ಕಾರಣ ಮತ್ತೊಂದು ಆಟೋ ಬುಕ್ ಮಾಡಿದ್ದರು. ಮುಂಚಿತವಾಗಿ ಬಂದ ಆಟೋ ಹತ್ತಿ, ಈ ಹಿಂದೆ ಬುಕ್ ಮಾಡಿದ್ದ ಆರ್ಡರ್ ರದ್ದು ಮಾಡಿದ್ದರು. ಇದನ್ನು ಗಮನಿಸಿದ ಆಟೋಚಾಲಕ ಯುವತಿಯನ್ನು ಹಿಂಬಾಲಿಸಿದ್ದಲ್ಲದೇ ಅವಾಚ್ಯ ಶಬ್ದಗಳಿಂದ ನಿಂದಿಸಿ ಹಲ್ಲೆಗೆ ಮುಂದಾಗಿದ್ದಾನೆ. ಅವಾಚ್ಯ ಶಬ್ದಗಳಿಂದ ನಿಂದಿಸಿರುವುದು ವಿಡಿಯೋದಲ್ಲಿ ಸೆರೆಯಾಗಿದೆ. ಇದೇ ವಿಡಿಯೋವನ್ನು ಸಾಮಾಜಿಕ ಜಾಲತಾಣ 'ಟ್ವಿಟರ್'ನಲ್ಲಿ ಯುವತಿಯ ಸ್ನೇಹಿತೆ ನಗರ ಪೊಲೀಸರಿಗೆ ಟ್ಯಾಗ್‌ಮಾಡಿ ಪೋಸ್ಟ್ ಮಾಡಿದ್ದಾರೆ. ಘಟನೆ ಬೆಳಕಿಗೆ ಬರುತ್ತಿದ್ದಂತೆ ಪರಿಶೀಲಿಸಿದ ಪೊಲೀಸರು, ಆಟೋಚಾಲಕ ಮುತ್ತುರಾಜ್ ಎಂಬಾತನನ್ನು ಕರೆಸಿ ವಿಚಾರಣೆ ನಡೆಸಿದ್ದಾರೆ.

### ಬೆಂಗಳೂರು, ಮೈಸೂರು, ಮಂಗಳೂರಿನಲ್ಲಿ ವಾಯುಗುಣಮಟ್ಟ ಕುಸಿತ | ಸರಕಾರಕ್ಕೆ ಎಚ್ಚರಿಕೆ

## 3 ಜಿಲ್ಲೆಗಳಲ್ಲಿ ಮಾಲಿನ್ಯ ಪ್ರಮಾಣ ಅಪಾಯಕಾರಿ ಮಟ್ಟಕ್ಕೆ

**ಬೆಂಗಳೂರು:** ಕರ್ನಾಟಕದ ಮೂರು ಪ್ರಮುಖ ನಗರಗಳಾದ ಬೆಂಗಳೂರು, ಮೈಸೂರು ಹಾಗೂ ಮಂಗಳೂರಿನಲ್ಲಿ ನಾವು ಉಸಿರಾಡುವ ಗಾಳಿಯ ಗುಣಮಟ್ಟ ತೀವ್ರವಾಗಿ ಕುಸಿದಿದ್ದು, ಮಾಲಿನ್ಯದ ಪ್ರಮಾಣ ಅಪಾಯಕಾರಿ ಮಟ್ಟಕ್ಕೆ ತಲುಪಿದೆ.

ಚಾಮುಂಡಿ ಬೆಟ್ಟದ ಮಡಿಲಲ್ಲಿರುವ, ಬಂಡೀ ಪುರ, ನಾಗರಹೊಳೆ ಮತ್ತಿತರ ಸಮೃದ್ಧ ಅರಣ್ಯ ಪ್ರದೇಶಗಳಿಂದ ಸುತ್ತುವರಿದಿರುವ ಮೈಸೂರು ನಗರದ ಗಾಳಿಯ ಗುಣಮಟ್ಟ ತೀವ್ರ ಕುಸಿತ ಕಂಡಿದೆ ಎಂಬ ಆಘಾತಕಾರಿ ಅಂಶ ಗ್ರೀನ್‌ಪೀಸ್ ಸಂಶೋ ಧನಾ ವರದಿಯಲ್ಲಿ ಬಹಿರಂಗಗೊಂಡಿದೆ. ಈ ವರದಿ, ವಾಯು ಮಾಲಿನ್ಯದಿಂದ ನಗರದ ಜನತೆಯ ಆರೋಗ್ಯದ ಮೇಲೆ ಗಂಭೀರ ಪರಿಣಾಮಗಳ ಬಗ್ಗೆ ಎಚ್ಚರಿಕೆ ನೀಡಿದೆ. ಈ ಕೂಡಲೇ ವಾಯುಮಾಲಿನ್ಯ ತಗ್ಗಿಸಲು ಸೂಕ್ತ ಕ್ರಮ ಕೈಗೊಳ್ಳದಿದ್ದರೆ, ನಮ್ಮ ಆರೋಗ್ಯದ ಮೇಲೆ ಅದು ತೀವ್ರ ತೆರನಾದ ದುಷ್ಪರಿಣಾಮ ಬೀರಲಿದೆ. ದಕ್ಷಿಣ ಭಾರತದ 10 ಪ್ರಮುಖ ನಗರಗಳ ಗಾಳಿಯಲ್ಲಿ ಮಾಲಿನ್ಯಕಾರಕ ಕಣಗಳಾದ ಪಿಎಂ 2.5 (ಸೂಕ್ಷ್ಮ) ಮತ್ತು ಪಿಎಂ 10 (ಅತಿ ಸೂಕ್ಷ್ಮ)ಗಳ ಪ್ರಮಾಣವು ಡಬ್ಲ್ಯುಎಚ್‌ಒ ಮಾರ್ಗಸೂಚಿ ನಿಗದಿಪಡಿಸಿದ ಸರಾಸರಿ ಮಟ್ಟ ಗಳನ್ನು ಮೀರಿದ್ದು ಇದು ಗಂಭೀರ ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗಬಹುದು ಎಂದು ಗ್ರೀನ್‌ಪೀಸ್ ಇಂಡಿಯಾದ ಸ್ಪೇರ್ ದಿ ಏರ್-2' ವರದಿಯು ಎಚ್ಚರಿಸಿದೆ.



**ದಕ್ಷಿಣ ಭಾರತದ ಪ್ರಮುಖ ನಗರಗಳ ಗಾಳಿಯೂ ಶುದ್ಧವಲ್ಲ:** ವರದಿಯು ದಕ್ಷಿಣ ಭಾರತದ ಪ್ರಮುಖ ನಗರಗಳಾದ ಬೆಂಗಳೂರು, ಮಂಗಳೂರು, ಮೈಸೂರು, ಹೈದರಾಬಾದ್, ಚೆನ್ನೈ, ವಿಶಾಖಪಟ್ಟಣ, ಕೊಚ್ಚಿ, ಅಮರಾವತಿ, ವಿಜಯವಾಡ, ಮತ್ತು ಪುದುಚೇರಿ ನಗರಗಳಲ್ಲಿ ಗಾಳಿಯ ಗುಣಮಟ್ಟವನ್ನು ವಿಶ್ಲೇಷಿಸುತ್ತದೆ. ಈ ಹತ್ತು ನಗರಗಳ ಪೈಕಿ ವಿಶಾಖ ಪಟ್ಟಣದಲ್ಲಿ ಗಾಳಿಯ ಗುಣಮಟ್ಟ ತೀವ್ರ ಕುಸಿತ ಕಂಡಿದೆ. ಇಲ್ಲಿನ ಗಾಳಿಯಲ್ಲಿ ಪಿಎಂ 2.5 ಕಣಗಳ ಪ್ರಮಾಣ ಡಬ್ಲ್ಯುಎಚ್‌ಒ ಮಾರ್ಗಸೂಚಿ ನಿಗದಿ ಪಡಿಸಿದ ಮಾನದಂಡಕ್ಕಿಂತ 10 ಪಟ್ಟು ಮತ್ತು ಪಿಎಂ 10 ಕಣಗಳ ಪ್ರಮಾಣ 9 ಪಟ್ಟು ಹೆಚ್ಚಿರುವುದು ದೃಢ ಪಟ್ಟಿದೆ. ಅಷ್ಟೇ ಅಲ್ಲದೆ, ಇದು ಗಾಳಿಯ ಗುಣಮಟ್ಟ ಮಾಪಕ ನ್ಯಾಷನಲ್ ಎಂಬಿಯಂಟ್ ಏರ್ ಕ್ವಾಲಿಟಿ ಸ್ಟಾಂಡರ್ಡ್ (ಎನ್‌ಎಎಕ್ಯೂಎಸ್) ನಿಗದಿಪಡಿಸಿದ ಮಿತಿಗಳನ್ನೂ ಮೀರಿದೆ ಎಂದು ಅಧ್ಯಯನವು ಸ್ಪಷ್ಟಪಡಿಸಿದೆ.

### 5 ಬೃಹತ್‌ನಗರಗಳಲ್ಲಿ ಗಾಳಿಯ ಗುಣಮಟ್ಟ ಕುಸಿತ

ಗ್ರೀನ್‌ಪೀಸ್ ಇಂಡಿಯಾದ ಸ್ಪೇರ್ ದಿ ಏರ್-2 ವರದಿಯು ವರದಿಯು ದಕ್ಷಿಣ ಭಾರತದ 10 ನಗರಗಳನ್ನು ಒಳಗೊಂಡಿದೆ. ಅವುಗಳಲ್ಲಿ ಐದು ನಗರಗಳು (ಬೆಂಗಳೂರು, ಹೈದರಾಬಾದ್, ಚೆನ್ನೈ, ವಿಜಯವಾಡ ಮತ್ತು ಪುದುಚೇರಿ) ಎನ್‌ಸಿಎಪಿ-ನ್ಯಾಶನಲ್ ಕ್ಲೀನ್ ಏರ್ ಪ್ರೋಗ್ರಾಮ್ ಅಡಿಯಲ್ಲಿ ನಿಗದಿಪಡಿಸಲಾದ ಗಾಳಿಯ ಗುಣಮಟ್ಟ ನಿರ್ಧರಿಸುವ ನಿರ್ದಿಷ್ಟ ಮಾನದಂಡಗಳನ್ನು ಸತತ ಐದು ವರ್ಷವೂ ಮೀರಿವೆ. ಈ ವರದಿಯಲ್ಲಿ ಉಲ್ಲೇಖಿಸಲಾಗಿರುವ ದಕ್ಷಿಣ ಭಾರತದ ನಗರಗಳ ಗಾಳಿಯಲ್ಲಿರುವ ಪಿಎಂ 2.5 ಮತ್ತು ಪಿಎಂ 10 ಕಣಗಳ ಪ್ರಮಾಣಕ್ಕೆ ಸಂಬಂಧಿಸಿದಂತೆ ವಾರ್ಷಿಕ ಮತ್ತು ಮಾಸಿಕ ಅಂಕಿ-ಅಂಶಗಳನ್ನು ಗಮನಿಸಿದಾಗ ಎಲ್ಲಾ ನಗರಗಳು ಡಬ್ಲ್ಯೂಎಚ್‌ಒ ನಿಗದಿ ಪಡಿಸಿರುವ ಮಾನದಂಡಗಳನ್ನು ಮೀರಿರುವುದನ್ನು ಗಮನಿಸಬಹುದು. ಮಂಗಳೂರು, ಹೈದರಾ ಬಾದ್, ಕೊಚ್ಚಿ, ಅಮರಾವತಿ, ಚೆನ್ನೈ ಮತ್ತು ವಿಜಯವಾಡಗಳಲ್ಲಿ ಪಿಎಂ 10 ಕಣಗಳ ವಾರ್ಷಿಕ ಸರಾಸರಿಯು ಎನ್‌ಎಎಕ್ಯೂಎಸ್ ಮಾನದಂಡಗಳಿಗಿಂತ ಸ್ವಲ್ಪಮಟ್ಟಿಗೆ ಎಂದರೆ 1.5 ಪಟ್ಟು ಹೆಚ್ಚಾಗಿದೆ.

**ಗಾಳಿಯ ಶುದ್ಧತೆ ಕಾಪಾಡುವುದು ಮುಖ್ಯ:** ಈ ಸಂಶೋಧನಾ ತಂಡದ ನೇತೃತ್ವವನ್ನು ವಹಿಸಿದ್ದ ಸಂಶೋಧಕಿ, ಆಕಾಂಕ್ಷಾ ಸಿಂಗ್, ಶುದ್ಧ ಗಾಳಿ ನಮ್ಮ ಆರೋಗ್ಯದ ಮೂಲಭೂತ ಅಗತ್ಯಗಳಲ್ಲಿ ಒಂದು. ಆದರೆ ಪ್ರಸ್ತುತ ವರದಿಯು ದೇಶದ ಎಲ್ಲಾ ಪ್ರಮುಖ ನಗರಗಳಲ್ಲಿನ ಮಾಲಿನ್ಯಕಾರಕ ಪಿಎಂ (ಪರ್ಟಿ ಕ್ಯುಲೇಟ್ ಮ್ಯಾಟರ್ಸ್) ಕಣಗಳ ಮಟ್ಟವು ಡಬ್ಲ್ಯೂ ಎಚ್‌ಒನಿಂದ ಪರಿಷ್ಕೃತ ನಿಗದಿತ ಮಾರ್ಗಸೂಚಿಗಳನ್ನು ಮೀರಿದೆ ಎಂಬುದನ್ನು ಸ್ಪಷ್ಟಪಡಿಸುತ್ತಿದೆ ಎಂದರು. ಪ್ರಸ್ತುತ ಅಧ್ಯಯನವು ಗಾಳಿಯ ಗುಣ ಮಟ್ಟಕ್ಕೆ ಸಂಬಂಧಿಸಿದಂತೆ ನ್ಯಾಶನಲ್ ಆಂಬಿಯೆಂಟ್ ಏರ್ ಕ್ವಾಲಿಟಿ ಸ್ಟ್ಯಾಂಡರ್ಸ್ (ಎನ್‌ಎಎಕ್ಯೂಎಸ್) ಮಾರ್ಗಸೂಚಿಯಲ್ಲಿ ತಿಳಿಸಲಾದ ಮಾನದಂಡ ಗಳನ್ನು ಮೀರಿರುವ ನಗರಗಳ ಮೇಲೆ ಕೇಂದ್ರೀಕೃತ ವಾಗಿದೆ. ಆದರೆ, ಈಗಾಗಲೇ ನಿಗದಿಪಡಿತ ಮಾನ ದಂಡಗಳನ್ನು ಅನುಸರಿಸುತ್ತಿರುವ ನಗರಗಳನ್ನೂ ಈ ಅಧ್ಯಯನಕ್ಕೆ ಒಳಪಡಿಸುವುದು ಅತ್ಯಗತ್ಯ. ಗಾಳಿಯ ಗುಣಮಟ್ಟ ಮಾನದಂಡಗಳನ್ನು ಮೀರುವ ಮುಂಚಿತವಾಗಿಯೇ ಕಾಪಾಡಿಕೊಳ್ಳುವುದು ಅಗತ್ಯ ಎಂದು ಎಚ್ಚರಿಕೆ ನೀಡಿದರು.